


# ಗಾಂಧೀ ಸ್ಮರಣೆ

ಗಾಂಧೀಜಿ ಅವರು ಹುಟ್ಟಿ 150 ವರ್ಷಗಳಾಗುತ್ತಿವೆ. ಇದೊಂದು ಸಂಖ್ಯೆಯ ಸಾಂಕೇತಿಕ ಆಚರಣೆ. ನಿಜಕ್ಕೂ ಗಾಂಧಿ ನಮ್ಮಲ್ಲಿ ಪ್ರತಿಕ್ಷಣ ಹುಟ್ಟುತ್ತಲೇ ಇರಬೇಕಾಗುತ್ತದೆ; ಬೆಳೆಯುತ್ತಲೇ ಹೋಗಬೇಕಾಗುತ್ತದೆ. ಹಾಗೆ ಹುಟ್ಟಿ ಬೆಳೆಯಲು ಅನುವು ಮಾಡಿಕೊಡುವ, ಬಾಪು ಚಿಂತನೆ, ಬದುಕನ್ನು ನೆನಪಿಸುವುದರ ಪುಟ್ಟ ಪ್ರಯತ್ನವಾಗಿ 'ಮಯೂರ'ದ ಈ ಸಂಚಿಕೆ ರೂಪುಗೊಂಡಿದೆ. ಗಾಂಧೀಜಿ ಅವರನ್ನು ಅರಿಯುವುದರ ಅಂಗವಾಗಿ ಇಲ್ಲಿನ ಗಾಂಧೀ ಬರಹಗಳು ಮೂಡಿವೆ.

ಹಲವು ದಿಕ್ಕಿನಲ್ಲಿ ಹರಡಿಹೋಗಿರುವ ಗಾಂಧೀಜಿ ಅವರನ್ನು ಅರಿಯುವುದು ಸುಲಭವೇನಲ್ಲ. ಅವರು ಪತ್ರಕರ್ತ, ನಿಪುಣ ರಾಜಕಾರಣಿ, ತಾತ್ವಿಕ, ದಾರ್ಶನಿಕ, ಲೇಖಕ – ಹೀಗೆ ಹತ್ತಾರು ಬಗೆಯಲ್ಲಿ ಅವರನ್ನು ಕಂಡುಕೊಳ್ಳುವುದು ಸಾಧ್ಯ. ಸಾಮಾಜಿಕವಾದ ಹಲವು ರೋಗ, ವ್ಯಸನ, ಗಾಯ, ವಿಕಾರಗಳಿಗೆ ಗಾಂಧೀಜಿ ಅವರ ಚಿಂತನೆಯಲ್ಲಿ ಮದ್ದುಗಳಿವೆ, ಉತ್ತರಗಳಿವೆ. ಈ ಕಾಲದಲ್ಲಂತೂ ಅವರ ಪ್ರಸ್ತುತತೆ ಹೆಚ್ಚುತ್ತಲೇ ಹೋಗಿದೆ. ಮತ್ತು ಎಲ್ಲ ದೇಶ–ಕಾಲದಲ್ಲೂ ಅವರು ಅನಿವಾರ್ಯವಾಗುತ್ತಲೇ ಹೋಗಿದ್ದಾರೆ. ಭಾರತದ ಪ್ರಮುಖ ಚಿಂತಕರು ಗಾಂಧಿ. ಅವರ ಚಿಂತನೆಯಲ್ಲಿ ಭಾರತವನ್ನು ಮಾತ್ರವಲ್ಲ, ಜಗತ್ತನ್ನು ಸಲಹುವ, ಉಳಿಸುವ ಬೀಜಗಳಿವೆ.

ತರುಣ ಪೀಳಿಗೆ ಗಾಂಧೀಜಿ ಅವರನ್ನು ಹೇಗೆ ಅರ್ಥ ಮಾಡಿಕೊಂಡಿದೆ ಎಂಬುದನ್ನು ದಾಖಲಿಸಲು ಹೊಸತಲೆಮಾರಿನ ಕೆಲವು ಲೇಖಕರಿಗೆ ಪ್ರತ್ಯೇಕ ಪ್ರಶ್ನೆಗಳನ್ನು 'ಮಯೂರ' ಕೇಳಿತ್ತು. ಈ ಸಂಚಿಕೆಯ ಭಾಗವಾಗಬೇಕಿದ್ದ ಅನೇಕ ಯುವಲೇಖಕರಿಂದ ಗಾಂಧಿ ಕುರಿತ ಟಿಪ್ಪಣಿಗಳು ಬರಲಿಲ್ಲ ಮಾತ್ರವಲ್ಲ ಅವರಿಂದ ಉತ್ಸಾಹದ ಪ್ರತಿಕ್ರಿಯೆಯೂ ಇರಲಿಲ್ಲ. ಇದಷ್ಟೇ ಅಲ್ಲ, ಗಾಂಧೀಜಿ ಅವರ ಕುರಿತ ನಿರಾಸಕ್ತಿ ಅನೇಕ ಕಡೆ ಇದೆ. ಯುವಲೇಖಕರ ನಿರಾಸಕ್ತಿ ಕೇವಲ ಪ್ರಾತಿನಿಧಿಕವಷ್ಟೆ.

ನಮ್ಮ ನಡುವಿನ ಪ್ರತಿಭಾಶಾಲೀ ಲೇಖಕ ನಟರಾಜ್ ಹುಳಿಯಾರ್ ಜಗತ್ತಿನೆಲ್ಲೆಡೆ ಬಾಪು ಬೀರಿದ ಪ್ರಭಾವದ ಬಗ್ಗೆ ಅರ್ಥಪೂರ್ಣವಾಗಿ ತಮ್ಮ ಲೇಖನದಲ್ಲಿ ಚರ್ಚಿಸಿದ್ದಾರೆ. ಅವರ ಲೇಖನ ನಮ್ಮೆಲ್ಲರ ಕೈದೀವಿಗೆಯಾಗುವಷ್ಟು ಶಕ್ತವಾಗಿದೆ. ಈ ಮಹತ್ವದ ಲೇಖನವೂ ಸೇರಿದಂತೆ ಇನ್ನಿತರ ಬರಹಗಳು ಉತ್ತಮ ಓದಿಗೆ, ಚಿಂತನೆಗೆ, ಮನನಕ್ಕೆ ಎಡೆ ಮಾಡಿಕೊಡುತ್ತವೆ ಎಂಬುದು ನಮ್ಮ ವಿಶ್ವಾಸ.

**ಸಂದೀಪ ನಾಯಕ**